**ಮುಖ್ಯ ಚುನಾವಣಾಧಿಕಾರಿಯವರ ಕಚೇರಿ, ಕರ್ನಾಟಕ**

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು–560 001.

**ಸಂಖ್ಯೆ:** ಸಿಆಸುಇ/39/ಸ್ವೀಪ್/2020–21 **ದಿನಾಂಕ:** 01ನೇ ಡಿಸೆಂಬರ್ 2020

**ಸುತ್ತೋಲೆ**

**ವಿಷಯ:** 2020–21ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಮತದಾರರ ದಿನಾಚರಣೆ (NVD) ಸಂಬಂಧಿಸಿದಂತೆ ಸ್ಪರ್ಧಾತ್ಮಕ ಚಟುವಟಿಕೆಗಳನ್ನು ಆಯೋಜಿಸುವುದು ಮತ್ತು 2020–2021ನೇ ಸಾಲಿನ ಮತದಾರ ಪಟ್ಟಿ ವಿಶೇಷ ಪರಿಷ್ಕರಣೆ (SSR) ಕುರಿತು.

– – –

ಭಾರತ ಚುನಾವಣಾ ಆಯೋಗವು ನೂತನ ಮತ್ತು ಭವಿಷ್ಯದ ಯುವ ಮತದಾರರಲ್ಲಿ ಚುನಾವಣೆ ಮತ್ತು ಮತದಾನ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವ ಸಲುವಾಗಿ ಪ್ರೌಢಶಾಲೆಗಳು, ಪದವಿ ಪೂರ್ವ–ತತ್ಸಮಾನ / ಆರ್ಟ್ಸ್ ಮತ್ತು ಡ್ರಾಯಿಂಗ್ ಶಾಲೆ / ಪ್ರಥಮ ದರ್ಜೆ–ತತ್ಸಮಾನ ಕಾಲೇಜುಗಳು / ವೈದ್ಯಕೀಯ ಕಾಲೇಜು / ತಾಂತ್ರಿಕ ಕಾಲೇಜು ಮತ್ತು ವಿಶ್ವವಿದ್ಯಾಲಯಗಳು ಸೇರಿದಂತೆ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ **"ಮತದಾರ ಸಾಕ್ಷರತಾ ಸಂಘ"** [Electoral Literacy Clubs] ಗಳನ್ನು ಹಾಗೂ ಪ್ರತಿ ವಿಧಾನಸಭಾ ಕ್ಷೇತ್ರದ ಮತಗಟ್ಟೆ ಕೇಂದ್ರಗಳಲ್ಲಿ ಚುನಾವಣಾ ಪಾಠಶಾಲೆ [ಚುನಾವಣಾ ಜಾಗೃತಿ ಸಂಘ] ಗಳನ್ನು ಸ್ಥಾಪಿಸಲಾಗಿದೆ.

ಪ್ರತಿ ವರ್ಷ 25ನೇ ಜನವರಿಯಂದು ರಾಷ್ಟ್ರೀಯ ಮತದಾರರ ದಿನಾಚರಣೆ (National Voters' Day) ಆಚರಿಸಲಾಗುತ್ತದೆ. ಸದರಿ ದಿನ ಹೊಸ ಮತದಾರರಿಗೆ ಮತದಾರರ ಗುರುತಿನ ಚೀಟಿ (ಎಪಿಕ್ ಕಾರ್ಡ್) ನೀಡಿ ಮತದಾರ ಸಾಕ್ಷರತೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ.

ರಾಷ್ಟೀಯ ಮತದಾರರ ದಿನಾಚರಣೆಗಾಗಿ ಕೋವಿಡ್ 19 ಹಿನ್ನೆಲೆಯಲ್ಲಿ ಮತದಾರರ ಸಾಕ್ಷರತಾ ಸಂಘಗಳ ವಿದ್ಯಾರ್ಥಿಗಳಿಗೆ ಚುನಾವಣೆಯ ಬಗ್ಗೆ ಆನ್‌ಲೈನ್ ಮೂಲಕ ಜಾಗೃತಿ ಮೂಡಿಸಲು ಸ್ಪರ್ಧಾತ್ಮಕ ಚಟುವಟಿಕೆಗಳನ್ನು ಏರ್ಪಡಿಸಬೇಕಾಗಿರುವುದರಿಂದ, ಪೂರ್ವಸಿದ್ಧತೆಗಾಗಿ **ದಿನಾಂಕ: 30.11.2020 ರಂದು ಬೆಳಗ್ಗೆ 10 ರಿಂದ 12 ಗಂಟೆಯವರೆಗೆ ನಡೆದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ) ಸಾರ್ವಜನಿಕ ಶಿಕ್ಷಣ ಇಲಾಖೆ, ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಜಿಲ್ಲಾ ಕೇಂದ್ರ ಸ್ಥಾನದಲ್ಲಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಪದವಿ ಕಾಲೇಜುಗಳ**

**ಪ್ರಾಂಶುಪಾಲರು ಆಯಾ ಜಿಲ್ಲಾ ಕೇಂದ್ರಗಳಲ್ಲಿನ ಕೇ–ಸ್ವ್ಯಾನ್ ಮೂಲಕ** ಭಾಗವಹಿಸಿ ತಮ್ಮ ಸಲಹೆ ಹಾಗೂ ಅಭಿಪ್ರಾಯಗಳನ್ನು ಈ ಕೆಳಕಂಡ ವಿಷಯಗಳ ಕುರಿತು ಹಂಚಿಕೊಳ್ಳಲಾಯಿತು.

ಶಾಲಾ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಆನ್‌ಲೈನ್ ಮೂಲಕ ಏರ್ಪಡಿಸಬೇಕಾಗಿರುವ ಸ್ಪರ್ಧೆಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ವಿವರಗಳು ಈ ಕೆಳಕಂಡಂತಿರುತ್ತವೆ.

I **ರಾಷ್ಟ್ರೀಯ ಮತದಾರರ ದಿನಾಚರಣೆ (National Voters' Day) ಅಂಗವಾಗಿ ಏರ್ಪಡಿಸಬೇಕಾದ ಸ್ಪರ್ಧೆಗಳ ವಿವರ :–**

1. ಪ್ರಬಂಧ ಸ್ಪರ್ದೆ, (ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ)
2. ಪೋಸ್ಟರ್ ಮತ್ತು ಕೊಲಾಜ್ ಮೇಕಿಂಗ್,
3. ರಸಪ್ರಶ್ನೆಯ ಸ್ಪರ್ಧಾತ್ಮಕ ಚಟುವಟಿಕೆಗಳು

II **ಸ್ಪರ್ಧೆಗಳನ್ನು ಆನ್‌ಲೈನ್ ಮೂಲಕ ಆಯೋಜಿಸಬೇಕಾದ ವಿದ್ಯಾಸಂಸ್ಥೆಗಳು :–**

1. ಪ್ರೌಢಶಾಲೆಗಳು [ಸರ್ಕಾರಿ, ಸರ್ಕಾರಿ ಅನುದಾನಿತ, ಅನುದಾನ ರಹಿತ ವಿದ್ಯಾಸಂಸ್ಥೆಗಳು]
2. ಪದವಿ ಪೂರ್ವ ಕಾಲೇಜುಗಳು, ಪಾಲಿಟೆಕ್ನಿಕ್ ಸಂಸ್ಥೆಗಳು [ಸರ್ಕಾರಿ, ಸರ್ಕಾರಿ ಅನುದಾನಿತ, ಅನುದಾನ ರಹಿತ ವಿದ್ಯಾ ಸಂಸ್ಥೆಗಳು]
3. ಪದವಿ ಕಾಲೇಜು, [ಸರ್ಕಾರಿ, ಸರ್ಕಾರಿ ಅನುದಾನಿತ, ಅನುದಾನ ರಹಿತ ವಿದ್ಯಾ ಸಂಸ್ಥೆಗಳು]
4. ವಿಶ್ವವಿದ್ಯಾಲಯಗಳು, ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ವೈದ್ಯಕೀಯ ಕಾಲೇಜುಗಳು [ಸರ್ಕಾರಿ, ಸರ್ಕಾರಿ ಅನುದಾನಿತ, ಅನುದಾನ ರಹಿತ ವಿದ್ಯಾ ಸಂಸ್ಥೆಗಳು]
5. ಕಲೆ/ಚಿತ್ರಕಲಾ ಶಾಲೆಗಳು [ಸರ್ಕಾರಿ, ಸರ್ಕಾರಿ ಅನುದಾನಿತ, ಅನುದಾನ ರಹಿತ ವಿದ್ಯಾ ಸಂಸ್ಥೆಗಳು]

**III ಆನ್‌ಲೈನ್ ಮೂಲಕ ನಡೆಸಬೇಕಾದ ಸ್ಪರ್ಧೆಯ ರೂಪರೇಶೆಗಳು ;–**

1. ಪ್ರಬಂಧ :–

   ಗರಿಷ್ಠ 750 ಪದಗಳಿಗೂ ಮೀರದಂತೆ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಬರೆಯುವುದು. ಎರಡೂ ಭಾಷೆಗಳ ಪ್ರಬಂಧವನ್ನು ಪ್ರತ್ಯೇಕವಾಗಿ ಬಹುಮಾನ ನೀಡಲು ಪರಿಗಣಿಸಲಾಗುವುದು. ಪ್ರಬಂಧ ಸ್ಪರ್ಧೆಗಳಿಗೆ ನೀಡಬಹುದಾದ ವಿಷಯಗಳ ಮಾದರಿಯನ್ನು **ಅನುಬಂಧ 1** ರಲ್ಲಿ ನೀಡಲಾಗಿದೆ.

**ಭಿತ್ತಿಪತ್ರ ಮತ್ತು ಕೊಲಾಜ್ ತಯಾರಿಕೆ :–**

22 X 28 ಇಂಚಿನ ಸ್ಟ್ಯಾಂಡರ್ಡ್ ಚಾರ್ಟ್ ಪೇಪರಿನಲ್ಲಿ. ಭಿತ್ತಿಪತ್ರ ಮತ್ತು ಕೊಲಾಜ್ ತಯಾರಿಕೆಗೆ ನೀಡಬಹುದಾದ ವಿಷಯಗಳ ಮಾದರಿಯನ್ನು **ಅನುಬಂಧ 1** ರಲ್ಲಿ ನೀಡಲಾಗಿದೆ.

2. **ರಸಪ್ರಶ್ನೆ :–**

ಚುನಾವಣಾ ವಿಷಯಕ್ಕೆ ಸಂಬಂದಿಸಿದ ವಿಷಯಗಳನ್ನು ಆಯಾ ಜಿಲ್ಲಾ ಮಟ್ಟದಲ್ಲಿ ಆಯ್ಕೆ ಮಾಡಿಕೊಂಡು, (ಕೋವಿಡ್–19 ಇರುವ ಈ ಸಂದರ್ಭದಲ್ಲಿ ಸುರಕ್ಷಿತ ಕ್ರಮಗಳನ್ನು ಅನುಸರಿಸಿ (Safety Measures) ಚುನಾವಣೆಗಳನ್ನು ನಡೆಸುವುದು ಹೇಗೆ ಎಂಬ ಬಗ್ಗೆ ಪ್ರಶ್ನೆಗಳು ಕಡ್ಡಾಯವಾಗಿ ಒಳಗೊಂಡಿರತಕ್ಕದ್ದು) ಈ ಕಛೇರಿಗೆ ವರದಿ ಮಾಡುವುದು.

ಪ್ರಬಂಧ, ಭಿತ್ತಿ ಪತ್ರ ಮತ್ತು ಕೊಲಾಜ್‌ಗಳ ಬಗ್ಗೆ ಈ ಕಛೇರಿಯಿಂದ **ಅನುಬಂಧ 1** ರಲ್ಲಿ ನೀಡಿರುವ ವಿಷಯಗಳ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಹಂತದಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳುವುದು. (ಕೋವಿಡ್–19 ಇರುವ ಈ ಸಂದರ್ಭದಲ್ಲಿ ಸುರಕ್ಷಿತ ಕ್ರಮಗಳನ್ನು ಅನುಸರಿಸಿ (Safety Measures) ಚುನಾವಣೆಗಳನ್ನು ನಡೆಸುವುದು ಹೇಗೆ ಎಂಬ ಬಗ್ಗೆ ಪ್ರಶ್ನೆಗಳು ಒಳಗೊಂಡಿರತಕ್ಕದ್ದು)

**IV ಸಂಪನ್ಮೂಲ ಮತ್ತು ಓದಬೇಕಾದ ಪುಸ್ತಕಗಳು:–**

1. India Votes – General Elections 2019 / ಲೋಕಸಭಾ ಚುನಾವಣೆ 2019
2. Returning Officer's Handbook / ರಿಟರ್ನಿಂಗ್ ಅಧಿಕಾರಿಯ ಕೈಪಿಡಿ
3. Book on Model code of conduct / ನೀತಿ ಸಂಹಿತೆಯ ಕೈಪಿಡಿ
4. SVEEP National Document / ರಾಷ್ಟ್ರೀಯ ಸ್ವೀಪ್ ದಾಖಲೆ
5. SVEEP Portal / ಸ್ವೀಪ್ ಪೋರ್ಟಲ್
6. Watching Videos from ECI you tube / ಭಾರತ ಚುನಾವಣಾ ಆಯೋಗದ ಯು–ಟ್ಯೂಬ್ ಚಾನಲ್ ವೀಕ್ಷಣೆ
7. Consistently following the updating from India Votes Face book page and others / ಭಾರತ ಮತದಾರರ ಪೇಸ್‌ಬುಕ್ ಪುಟ ಹಾಗೂ ಇತರೆ, ನಿರಂತರ ವೀಕ್ಷಣೆ ಹಾಗೂ ಇಂದೀಕರಣ.

8. ECI web site / ಭಾರತ ಚುನಾವಣಾ ಆಯೋಗದ ಅಂತರ್ಜಾಲ : eci.nic.in

9. CEO web site / ಮುಖ್ಯ ಚುನಾವಣಾಧಿಕಾರಿಗಳ [ಸಿಇಓ] ಅಂತರ್ಜಾಲ : ceokarnataka.kar.nic.in

## V ಆನ್‌ಲೈನ್ ಮೂಲಕ ಸ್ಪರ್ಧಾತ್ಮಕ ಚಟುವಟಿಕೆಗಳನ್ನು ನಡೆಸಬೇಕಾದ ವೇಳಾಪಟ್ಟಿ ಹಾಗೂ ಕಾರ್ಯಕ್ರಮದ ಜವಾಬ್ದಾರಿ :-

ಸ್ಪರ್ಧಾತ್ಮಕ ಚಟುವಟಿಕೆಗಳನ್ನು ಶಾಲೆ, ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಆನ್‌ಲೈನ್ ಮೂಲಕ ಏರ್ಪಡಿಸಬೇಕಾಗಿರುವ ವೇಳಾಪಟ್ಟಿ ಮತ್ತು ಕಾರ್ಯಕ್ರಮದ ಜವಾಬ್ದಾರಿಯ ನಿಗದಿ ಮಾಡಿರುವ ವಿವರಗಳನ್ನು **ಅನುಭಂದ 2** ರಲ್ಲಿ ನೀಡಲಾಗಿದೆ.

## VI ಬಹುಮಾನದ ಅನುದಾನ ಹಂಚಿಕೆ :-

ಈ ಸ್ಪರ್ದಾತ್ಮಕ ಚಟುವಟಿಕೆಗಳನ್ನು ಆನ್‌ಲೈನ್ ಮೂಲಕ ಆಯೋಜಿಸಲು ಹಾಗೂ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವ ಸಲುವಾಗಿ ಪ್ರತಿ ಸ್ಪರ್ಧೆಗೆ ಬಹುಮಾನವನ್ನು ಪುಸ್ತಕಗಳ ರೂಪದಲ್ಲಿ ನೀಡಲಾಗುವುದು. ಶಾಲಾ ಮಟ್ಟದಲ್ಲಿ ಆಯೋಜಿಸುವ ಸ್ಪರ್ಧೆಗಳಿಗೆ ಬೇಕಾಗುವ ಅನುದಾನವನ್ನು ಸ್ಥಳೀಯ ನಿಧಿಯಿಂದ ಭರಿಸತಕ್ಕದ್ದು.

ರಸಪ್ರಶ್ನೆ ಸ್ಪರ್ಧೆಗಳಿಗೆ ಸಂಬಂಧಿಸಿದಂತೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸ್ಪರ್ಧೆಗಳ ವಿಜೇತರಿಗೆ ಈ ಕೆಳಕಂಡಂತೆ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನ ವಿತರಿಸಲಾಗುವುದು.

| **ಬಹುಮಾನಗಳನ್ನು ಪುಸ್ತಕಗಳ ರೂಪದಲ್ಲಿ ನೀಡುವ ವಿವರ** | **ತಾಲ್ಲೂಕು ಮಟ್ಟದಲ್ಲಿ** | **ಜಿಲ್ಲಾ ಮಟ್ಟದಲ್ಲಿ** |
|---|---|---|
| | **ಬಹುಮಾನದ ಮೊತ್ತ ರೂಪಾಯಿಗಳಲ್ಲಿ** | |
| ಪ್ರಥಮ ಬಹುಮಾನ | 1000.00 | 3000.00 |
| ದ್ವಿತೀಯ ಬಹುಮಾನ | 500.00 | 2000.00 |
| ತೃತೀಯ ಬಹುಮಾನ | 250.00 | 1000.00 |

ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ನಡೆಯುವ ಸ್ಪರ್ಧೆಗಳಿಗೆ ಒದಗಿಸುವ ಅನುದಾನದ ವಿವರಗಳವನ್ನು **ಅನುಬಂಧ 3** ರಲ್ಲಿ ನೀಡಲಾಗಿದೆ.

**VII ವಿಜೇತರನ್ನು ಆಯ್ಕೆ ಮಾಡುವ ಕಾರ್ಯವಿಧಾನ :–**

1. ಶಾಲೆ ಮಟ್ಟದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು ವಿಜೇತರನ್ನು ಆಯ್ಕೆ ಮಾಡುತ್ತಾರೆ.
2. ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ವಿಜೇತರನ್ನು ಆಯ್ಕೆ ಮಾಡುತ್ತಾರೆ.
3. ಜಿಲ್ಲಾ ಮಟ್ಟದ ವಿಜೇತರನ್ನು ಆಯ್ಕೆ ಮಾಡುವ ಸಮಿತಿಯು ಜಿಲ್ಲಾ ಪಂಚಾಯ್ತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ, ಉಪನಿರ್ದೇಶಕರು [ಆಡಳಿತ], ಉಪನಿರ್ದೇಶಕರು [ಅಭಿವೃದ್ಧಿ], ಉಪನಿರ್ದೇಶಕರು [ಪದವಿ ಪೂರ್ವ], ಆಯಾ ಜಿಲ್ಲೆಯ ಕಾಲೇಜು / ಪಾಲಿಟೆಕ್‌ನಿಕ್ ಪ್ರಾಂಶುಪಾಲರನ್ನೊಂಳಗೊಂಡಿರುತ್ತದೆ.
4. ಶಾಲಾ ಮಟ್ಟದಲ್ಲಿ ಆಯ್ಕೆಯಾದ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ತಾಲ್ಲೂಕು ಮಟ್ಟಕ್ಕೆ, ಅದೇ ರೀತಿ ತಾಲ್ಲೂಕು ಮಟ್ಟದಿಂದ ಜಿಲ್ಲಾ ಮಟ್ಟಕ್ಕೆ ಮತ್ತು ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಮಾತ್ರ ರಾಜ್ಯ ಮಟ್ಟಕ್ಕೆ ಆಯ್ಕೆ ಮಾಡತಕ್ಕದ್ದು.

**VIII ಉಸ್ತುವಾರಿ, ಮತ್ತು ದಸ್ತಾವೇಜು ಮಾಡುವುದರ ವರದಿ ಸಿದ್ಧಪಡಿಸುವುದು:–**

1. ಶಾಲಾ ಮಟ್ಟದ ಆನ್‌ಲೈನ್ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಮತ್ತು ವಿಜೇತರ ಪಟ್ಟಿಯನ್ನು ಹಾಗೂ ಸ್ಪರ್ಧೆಗಳನ್ನು ವೀಕ್ಷಿಸಿದ ವೀಕ್ಷಕರ ಮಾಹಿತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ನೀಡುವುದು.
2. ತಾಲ್ಲೂಕು ಮಟ್ಟದ ಆನ್‌ಲೈನ್ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಮತ್ತು ವಿಜೇತರ ಪಟ್ಟಿಯನ್ನು ಹಾಗೂ ಸ್ಪರ್ಧೆಗಳನ್ನು ವೀಕ್ಷಿಸಿದ ವೀಕ್ಷಕರ ಮಾಹಿತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಆಯಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಚೇರಿಗೆ ನೀಡುವುದು.
3. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರು ಸ್ವೀಪ್ ಜಿಲ್ಲಾ ಸಮನ್ವಯಾಧಿಕಾರಿಗಳು ಸಹ ಆಗಿದ್ದು, ಅಂತರ ಶಾಲೆ / ಅಂತರ ಪದವಿ ಪೂರ್ವ ಕಾಲೇಜು / ಅಂತರ ಕಾಲೇಜು / ಅಂತರ ವಿಶ್ವವಿದ್ಯಾಲಯ ಮಟ್ಟದಲ್ಲಿ ನಡೆಯುವ ಆನ್‌ಲೈನ್ ಸ್ಪರ್ಧೆಗಳ ಚಟುವಟಿಕೆ ಬಗ್ಗೆ ಉಸ್ತುವಾರಿ ವಹಿಸಿ ಆನ್‌ಲೈನ್ ಸ್ಪರ್ಧೆಗಳ ವಿವರಗಳನ್ನು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಕಛೇರಿಯಿಂದ ಒದಗಿಸಲಾಗುವ ಗೂಗಲ್ ಸ್ಪ್ರೆಡ್‌ಶೀಟ್‌ನಲ್ಲಿ ಅಳವಡಿಸುವುದು.
4. ಮೇಲೆ ತಿಳಿಸಿರುವ ಎಲ್ಲಾ ಚಟುವಟಿಕೆಗಳನ್ನು, ಆನ್‌ಲೈನ್ ಸ್ಪರ್ಧೆಯ ಪ್ರಕ್ರಿಯೆಯನ್ನು ಹಾಗೂ ಅದರಲ್ಲಿ ಗಮನಿಸಲಾದ ಅತ್ಯುತ್ತಮ ಅಭ್ಯಾಸಗಳನ್ನು ಒಳಗೊಂಡ ಪ್ರಕರಣಗಳನ್ನು ದಾಖಲಿಸಿ, ಅದರ ವರದಿಯನ್ನು ಮುಖ್ಯ ಚುನಾವಣಾಧಿಕಾರಿಗಳ ಕಛೇರಿಗೆ ಕಳುಹಿಸುವುದು.

**IX ಕೋವಿಡ್–19ರ ಸಂಬಂಧ ಮುಂಜಾಗೃತ ಕ್ರಮಗಳು:–**

1. ಕಡ್ಡಾಯವಾಗಿ ಮೂಗು ಮತ್ತು ಬಾಯಿ ಮುಚ್ಚಿಕೊಳ್ಳುವಂತೆ ಮಾಸ್ಕ್ ಧರಿಸುವುದು
2. ಕಡ್ಡಾಯವಾಗಿ ಕನಿಷ್ಠ 6 ಅಡಿಗಳ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು
3. ಕೈಗಳನ್ನು ಸೋಪು ದ್ರಾವಣದಿಂದ ಶುಭ್ರಗೊಳಿಸುವುದು (ಸ್ಯಾನಿಟೈಜೇಷನ್ ಮಾಡಿಕೊಳ್ಳುವುದು)
4. ಪ್ರತಿಯೊಬ್ಬರಿಗೂ ಕಡ್ಡಾಯವಾಗಿ ದೇಹದ ಉಷ್ಣತೆಯನ್ನು ಪರೀಕ್ಷಿಸತಕ್ಕದ್ದು (ಟೆಂಪರೇಚರ್ ಚಕ್)
5. ಸ್ಪರ್ಧೆಗಳನ್ನು ಆಯೋಜಿಸುವ ಶಾಲಾ/ಕಾಲೇಜು/ಗ್ರಂಥಾಲಯ ಇತ್ಯಾದಿ ಕೊಠಡಿಗಳನ್ನು ಕಡ್ಡಾಯವಾಗಿ ಸ್ವಚ್ಚಗೊಳಿಸಿ ಸ್ಯಾನಿಟೈಸೇಷನ್ ಮಾಡತಕ್ಕದ್ದು
6. ನಿಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳು ನಿಗದಿಪಡಿಸಿದ ಕೋವಿಡ್ 19ರ ಮುಂಜಾಗ್ರತಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

**X ಭಾಗೀದಾರರ (stakeholder) ಜವಾಬ್ದಾರಿಗಳು:–**

| ಅಧಿಕಾರಿಗಳು | ಜವಾಬ್ದಾರಿಗಳು |
|---|---|
| ಉಪ ನಿರ್ದೇಶಕರು [ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ<br><br>ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ,<br><br>ಪಾಲಿಟೆಕ್ನಿಕ್ ನೋಡಲ್ ಅಧಿಕಾರಿಗಳು,<br><br>ಪದವಿ ಕಾಲೇಜು ನೋಡಲ್ ಅಧಿಕಾರಿಗಳು,<br><br>ವಿಶ್ವವಿದ್ಯಾಲಯಗಳ ನೋಡಲ್ ಅಧಿಕಾರಿಗಳು | ಆನ್‌ಲೈನ್ ಸ್ಪರ್ಧೆಗಳ ಬಗ್ಗೆ ಶಾಲೆಗಳು / ಕಾಲೇಜುಗಳಿಗೆ ತಿಳಿಸುವುದು ಮತ್ತು ಜಿಲ್ಲೆಯ ಚಟುವಟಿಕೆಗಳ ಮೇಲ್ವಿಚಾರಣೆ ಮತ್ತು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಇವರಿಗೆ ವರದಿ ಮಾಡುವುದು.<br>ಶಿಕ್ಷಣ ಸಂಸ್ಥೆಗಳು ಫಲಿತಾಂಶವನ್ನು ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ತಿಳಿಸಬೇಕು. ಪ್ರಬಂಧವನ್ನು ಎಲ್ಲರ ಮೊಬೈಲ್ ವಾಟ್‌ಸೆಪ್‌ಗಳಿಗೆ ರವಾನಿಸತಕ್ಕದ್ದು. ಇದರಿಂದ ಎಲ್ಲರಿಗೂ ಅನುಕೂಲ ವಾಗುತ್ತದೆ. ಫಲಿತಾಂಶವನ್ನು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಇವರಿಗೆ ಆನ್‌ಲೈನ್‌ನಲ್ಲಿ ವರದಿ ಮಾಡತಕ್ಕದ್ದು. |
| ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಸ್ವೀಪ್ ನೋಡಲ್ ಅಧಿಕಾರಿಗಳು | ಪ್ರಬಂಧ ಭಿತ್ತಿ ಚಿತ್ರ ಮತ್ತು ಕೊಲಾಜ್ ಚುಟುವಟಿಕೆಗಳಲ್ಲಿ ಜಿಲ್ಲಾ ಮಟ್ಟದಲ್ಲಿನ ವಿಜೇತರ ವರದಿಯನ್ನು ಗೂಗಲ್ ಸ್ಪ್ರೆಡ್ ಶೀಟ್‌ನಲ್ಲಿ ಅಳವಡಿಸಲು ಕ್ರಮ ಜರುಗಿಸುವುದು. |

| | |
|---|---|
| ಹಿರಿಯ ಸಮಾಲೋಚಕರು [ಸ್ವೀಪ್] | ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಮಾಹಿತಿಯನ್ನು ಆನ್‌ಲೈನ್ ಮೂಲಕ ಪ್ರಸಾರ ಮಾಡುವುದು ಮತ್ತು ಜಿಲ್ಲೆಗಳ ವಿದ್ಯಾರ್ಥಿಗಳ ವಿವರಗಳು, ಪ್ರೇಕ್ಷಕರ ಹಾಜರಾತಿ, ವಿಜೇತ ವಿವರಗಳು ಸೇರಿದಂತೆ ದತ್ತಾಂಶ ಸಂಗ್ರಹಣೆ ಕುರಿತು ಡಿಇಓಗಳೊಂದಿಗೆ ಸಮನ್ವಯ ಸಾಧಿಸುವುದು. |
| ಬಿಬಿಎಂಪಿಯ ವಿಶೇಷ ಆಯುಕ್ತರು | ಬಿಬಿಎಂಪಿ ಪ್ರದೇಶದ ಎಲ್ಲಾ ಶಾಲೆಗಳಲ್ಲಿನ ನೋಡಲ್ ಅಧಿಕಾರಿಗಳಿಗೆ ಆನ್‌ಲೈನ್ ಮೂಲಕ ಮಾಹಿತಿಯನ್ನು ಪ್ರಸಾರ ಮಾಡಲು ಮತ್ತು ಸ್ಪರ್ಧೆಯನ್ನು ಕಾರ್ಯಗತಗೊಳಿಸುವ ಜವಾಬ್ದಾರಿ ಹೊಂದಿರುತ್ತಾರೆ. |

## XI ನಮೂದುಗಳು ಮತ್ತು ಸಂಪರ್ಕ ಮಾಹಿತಿಯ ಸಲ್ಲಿಕೆ:-

1. ಎಲ್ಲಾ ಸ್ಪರ್ಧೆಗಳ ವಿಜೇತರ ಸಂಪೂರ್ಣ ವಿವರಗಳನ್ನು ಕಡ್ಡಾಯವಾಗಿ ಈ ಕಛೇರಿಯಿಂದ ಒದಗಿಸಲಾದ ಗೂಗಲ್ ಸ್ಪ್ರೆಡ್‌ಶೀಟ್‌ನಲ್ಲಿ ಅಳವಡಿಸುವುದು
2. ಯಾವುದೇ ಪ್ರಶ್ನೆ ಅಥವಾ ಸ್ಪಷ್ಟೀಕರಣಕ್ಕಾಗಿ, consveep@gmail.com ಅಥವಾ 080-22288823 ಗೆ ಕರೆ ಮಾಡಬಹುದು, ಶ್ರೀ ರಮೇಶ್ 8867644865 ಶ್ರೀ ಎಂ.ವಿ. ವೆಂಕಟಾಚಲಪತಿ 9880152623. ಶ್ರೀ ಎಸ್.ಕೆ. ಸೂರ್ಯಪ್ರಕಾಶ್ 9886228649, ಶ್ರೀ ಕೆ ಸೋಮಶೇಖರ್ 9663312146 ಅಥವಾ ಶ್ರೀ ಎನ್. ಪ್ರವೀಣ್-8892741320 ಇವರುಗಳನ್ನು ಸಂಪರ್ಕಿಸಬಹುದು.

01.12.2020

(ಡಿ.ಶಂಭು ಭಟ್)
ಜಂಟಿ ಮುಖ್ಯ ಚುನಾವಣಾಧಿಕಾರಿಗಳು,
ಸಿ.ಆ.ಸು.ಇ (ಚುನಾವಣೆಗಳು)

**ಪ್ರತಿಯನ್ನು ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ:-**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬೆಂಗಳೂರು.
2. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಮಾನ್ಯ ಕುಲಪತಿಗಳು,
3. ಮಾನ್ಯ ಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
4. ಮಾನ್ಯ ಕುಲಪತಿಗಳು, ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ, ಬೆಂಗಳೂರು
5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು,
6. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು,
7. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರ 18ನೇ ಸಂಪಿಗೆ ರಸ್ತೆ, ಬೆಂಗಳೂರು.
8. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
9. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು/ಕಲಬುರ್ಗಿ/ಬೆಳಗಾಂ/ಮೈಸೂರು.
10. ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಆಯುಕ್ತರು ಬಿಬಿಎಂಪಿ ಬೆಂಗಳೂರು.
11. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ,
12. ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು,

13. ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಸ್ವೀಪ್ ನೋಡಲ್ ಅಧಿಕಾರಿಗಳು,
14. ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು [ಪ್ರಾಥಮಿಕ ಶಿಕ್ಷಣ] [ಪ್ರೌಢಶಿಕ್ಷಣ] ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಮತ್ತು ಡಿ.ಎಸ್.ಇ.ಆರ್.ಟಿ. ಹಾಗೂ ವಿಭಾಗೀಯ ಇಎಲ್‌ಸಿ ನೋಡಲ್ ಅಧಿಕಾರಿಗಳು,
15. ನಿರ್ದೇಶಕರು, ಅಪರ ಆಯುಕ್ತಾಲಯ, ಕಲಬುರಗಿ ಮತ್ತು ಧಾರವಾಡ. ಹಾಗೂ ವಿಭಾಗೀಯ ಇಎಲ್‌ಸಿ ನೋಡಲ್ ಅಧಿಕಾರಿಗಳು,
16. ಸಹ ನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಮಂಡಳಿ, ಬೆಂಗಳೂರು.
17. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ,
18. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು [ಆಡಳಿತ] ಮತ್ತು [ಅಭಿವೃದ್ಧಿ] ಸಾರ್ವಜನಿಕ ಶಿಕ್ಷಣ ಇಲಾಖೆ,
19. ಎಲ್ಲಾ ತಹಸೀಲ್ದಾರರು, ಕಂದಾಯ ಇಲಾಖೆ, ಕರ್ನಾಟಕ ರಾಜ್ಯ,
20. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ,
21. ಕಛೇರಿ ಪ್ರತಿ/ರಕ್ಷಾ ಕಡತಕ್ಕೆ.

## ಅನುಬಂಧ–01

**ಸಂಖ್ಯೆ:** ಸಿಆಸುಇ/39/ಸ್ವೀಪ್/2020–21, **ದಿನಾಂಕ:** 26ನೇ ನವೆಂಬರ್ 2020ರ

1 **ಪ್ರೌಢಶಾಲೆಗಳಿಗೆ, ಕಲೆ ಮತ್ತು ಚಿತ್ರಕಲಾ ಶಾಲೆಗಳಿಗೆ :–**

**ಭಿತ್ತಿಪತ್ರ ಮತ್ತು ಕೊಲಾಜ್ ತಯಾರಿಕೆಗೆ ನೀಡಬಹುದಾದ ವಿಷಯಗಳ ಮಾದರಿ**

22 x 28 ಇಂಚುಗಳ ಅಳತೆಯುಳ್ಳ ನಿಗದಿತ ಕಾಗದ ಬಳಸಿ ಭಿತ್ತಿ ಚಿತ್ರ ಬಿಡಿಸುವುದು / ಕೊಲಾಜ್ ರಚಿಸುವುದು.

| | | |
|---|---|---|
| (1) | The roll of Elector in Democracy / Elections | ಪ್ರಜಾಪ್ರಭುತ್ವ / ಚುನಾವಣೆಗಳಲ್ಲಿ ಮತದಾರರ ಪಾತ್ರ |
| (2) | Duties and responsibilities of electors in electoral process | ಚುನಾವಣೆಗಳಲ್ಲಿ ಮತದಾರರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು |
| (3) | What are the precautions to be taken during elections due to Covid-19 | ಕೋವಿಡ್–19 ಪ್ರಯುಕ್ತ ಚುನಾವಣೆಗಳಲ್ಲಿ ಯಾವ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಬೇಕು |
| (4) | Accessible Elections | ಸುಗಮ ಚುನಾವಣೆಗಳು |
| (5) | Ethical Elections | ನೈತಿಕ ಚುನಾವಣೆಗಳು |

2 **ಪ್ರೌಢಶಾಲೆಗಳಿಗೆ**

**ಪ್ರಬಂಧ ಸ್ಪರ್ಧೆ ವಿಷಯಗಳು:–**

| | | |
|---|---|---|
| (1) | Importance of EVM and VVPAT in the voting process | ಮತದಾನದಲ್ಲಿ ಇವಿಎಂ ಮತ್ತು ವಿವಿಪ್ಯಾಟ್‌ಗಳ ಪ್ರಾಮುಖ್ಯತೆ |
| (2) | Electors education and participation is very much essential in educational system | ಶಿಕ್ಷಣ ವ್ಯವಸ್ಥೆಯಲ್ಲಿ ಮತದಾರರ ಶಿಕ್ಷಣ ಮತ್ತು ಭಾಗವಹಿಸುವಿಕೆ ಬಹಳ ಅವಶ್ಯಕ |
| (3) | How to conduct the elections during the Covid-19 pandemic disease | ಕೋವಿಡ್ 19 ಸಾಂಕ್ರಾಮಿಕ ರೋಗವಿರುವುದರಿಂದ ಈ ಅವಧಿಯಲ್ಲಿ ಚುನಾವಣೆಯನ್ನು ಹೇಗೆ ನಡೆಸಬಹುದು? |
| (4) | Inclusive Elections | ಒಳಗೊಳ್ಳುವ ಚುನಾವಣೆಗಳು |

3 **ಪದವಿ ಪೂರ್ವ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್ ಸಂಸ್ಥೆಗಳಿಗೆ**

**ಪ್ರಬಂಧ ಸ್ಪರ್ಧೆ ವಿಷಯಗಳು:–**

| | | |
|---|---|---|
| (1) | The roll of Elector in Democracy / Elections | ಪ್ರಜಾಪ್ರಭುತ್ವ / ಚುನಾವಣೆಗಳಲ್ಲಿ ಮತದಾರರ ಪಾತ್ರ |
| (2) | Periodic Elections good for Democracy | ಅವಧಿಗೆ ಅನುಗುಣವಾದ ಚುನಾವಣೆಗಳು ಪ್ರಜಾಪ್ರಭುತ್ವಕ್ಕೆ ಉತ್ತಮ |
| (3) | Voting is the major weapon to control the Government | ಸರ್ಕಾರವನ್ನು ನಿಯಂತ್ರಿಸುವಲ್ಲಿ ಮತದಾನವು ಒಂದು ಪ್ರಧಾನ ಅಸ್ತ್ರ |
| (4) | Use and importance of Forms 6, | 6, 6ಎ, 7, 8 ಮತ್ತು 8ಎ ನಮೂನೆಗಳ ಬಳಕೆ |

| | | |
|---|---|---|
| | 6a, 7, 8 and 8a | ಮತ್ತು ಅವುಗಳ ಪ್ರಾಮುಖ್ಯತೆ |
| (5) | The role of Electoral Literacy Clubs in electors' education | ಮತದಾರರ ಶಿಕ್ಷಣದಲ್ಲಿ ಮತದಾರ ಸಾಕ್ಷರತಾ ಸಂಘಗಳ ಪಾತ್ರ |
| (6) | Effects of Covid-19 on Elections | ಚುನಾವಣೆಗಳ ಮೇಲೆ ಕೋವಿಡ್–19ರ ಪರಿಣಾಮಗಳು |

**4 ಪ್ರಥಮ ದರ್ಜೆ ಕಾಲೇಜುಗಳು, ವಿಶ್ವವಿದ್ಯಾಲಯಗಳು ಮತ್ತು ತಾಂತ್ರಿಕ, ಶಿಕ್ಷಣ ಸಂಸ್ಥೆಗಳಗೆ ಪ್ರಬಂಧ ಸ್ಪರ್ದೆ ವಿಷಯಗಳು:–**

| | | |
|---|---|---|
| (1) | Inclusive participation makes the democracy successful | ಒಳಗೊಳ್ಳುವ ಭಾಗವಹಿಸುವಿಕೆಯು ಪ್ರಜಾಪ್ರಭುತ್ವವನ್ನು ಯಶಸ್ವಿಗೊಳಿಸುತ್ತದೆ |
| (2) | Party system in India | ಭಾರತದಲ್ಲಿನ ಪಕ್ಷ ಪದ್ದತಿ |
| (3) | Methods of encouraging people to Vote | ಜನರನ್ನು ಮತ ಚಲಾಯಿಸಲು ಪ್ರೋತ್ಸಾಹಿಸುವ ವಿಧಾನಗಳು |
| (4) | The Importance of Election Commission of India In Elections | ಚುನಾವಣೆಗಳಲ್ಲಿ ಭಾರತ ಚುನಾವಣಾ ಆಯೋಗದ ಪ್ರಾಮುಖ್ಯತೆ |
| (5) | The importance of free, fair and regular elections in India | ಭಾರತದಲ್ಲಿ ಮುಕ್ತ ನ್ಯಾಯೋಚಿತ ಮತ್ತು ನಿರಂತರ ಚುನಾವಣೆಗಳ ಮಹತ್ವ |
| (6) | How we can conduct the election during the Covid-19 Pandemic in India | ಕೋವಿಡ್–19 ಸಾಂಕ್ರಾಮಿಕ ರೋಗದ ಸಮಯದಲ್ಲಿ ನಾವು ಭಾರತದಲ್ಲಿ ಚುನಾವಣೆಗಳನ್ನು ಹೇಗೆ ನಡೆಸಬಹುದು |
| (7) | Elections in India Vs other countries | ಭಾರತದಲ್ಲಿನ ಚುನಾವಣೆಗಳು ಮತ್ತು ಇತರೆ ದೇಶಗಳಲ್ಲಿನ ಚುನಾವಣೆಗಳು |
| (8) | Role of Money and Musscle Power in Elections | ಚುನಾವಣೆಗಳಲ್ಲಿ ಹಣ ಮತ್ತು ತೋಳ್ಬಲದ ಪಾತ್ರ |

## ಅನುಬಂಧ-2

**ಸಂಖ್ಯೆ ಸಿಆಸುಇ:39:ಸ್ವೀಪ್:2020 ದಿನಾಂಕ: 24ನೇ ನವೆಂಬರ್ 2020 ರ ಸ್ಪರ್ಧಾ ಚಟುವಟಿಕೆಗಳನ್ನು ನಡೆಸಬೇಕಾದ ವೇಳಾಪಟ್ಟಿ ಹಾಗೂ ಕಾರ್ಯಕ್ರಮದ ಜವಾಬ್ದಾರಿ :-**

| ಕ್ರ ಸಂ | ಚಟುವಟಿಕೆ | ನಿಗದಿಪಡಿಸಿದ ದಿನಾಂಕ | ಕಾರ್ಯಕ್ರಮದ ಜವಾಬ್ದಾರಿ ನಿಗದಿ |
|---|---|---|---|
| 1 | ಸ್ಪರ್ಧೆಗಳ ಬಗ್ಗೆ ಎಲ್ಲಾ ಶಾಲಾಕಾಲೇಜುಗಳಿಗೆ ತಿಳಿಸುವುದು | 01-12-2020 | ಆಯಾ ಜಿಲ್ಲಾ ಉಪನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ (ಉಪನಿರ್ದೇಶಕರು, ರಾಜ್ಯ & ಜಿಲ್ಲಾ ಮಟ್ಟದ ತರಬೇತುದಾರರು, ಪ್ರಾಂಶುಪಾಲರು-ಅನುಬಂಧ "ಆ" ಪ್ರಕಾರ) |
| 2 | ವಿದ್ಯಾರ್ಥಿಗಳ ನೋಂದಣಿ:- ರಸಪ್ರಶ್ನೆ, ಪ್ರಬಂಧ, ಭಿತ್ತಿಚಿತ್ರ ಮತ್ತು ಕೊಲಾಜ್ [ಪ್ರತ್ಯೇಕವಾಗಿ] | 05-12-2020 | ಮತದಾರ ಸಾಕ್ಷರತಾ ಸಂಘದ ಆಯಾ ಶಾಲಾ ಕಾಲೇಜುಗಳ ನೋಡಲ್ ಅಧಿಕಾರಿಗಳು |
| 3 | ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಸ್ಪರ್ಧೆಗಳನ್ನು ಕೈಗೊಳ್ಳುವುದು | 07-12-2020 ರಿಂದ 11-12-2020 | ಆಯಾ ಶಾಲೆ/ಕಾಲೇಜುಗಳ ಮತದಾರ ಸಾಕ್ಷರತಾ ಸಂಘದ ನೋಡಲ್ ಅಧಿಕಾರಿಗಳು (ಉಪನಿರ್ದೇಶಕರು, ರಾಜ್ಯ & ಜಿಲ್ಲಾ ಮಟ್ಟದ ತರಬೇತುದಾರರು, ಪ್ರಾಂಶುಪಾಲರು-ಅನುಬಂಧ "ಆ" ಪ್ರಕಾರ) |
| 4 | ತಾಲ್ಲೂಕು ಮಟ್ಟದಲ್ಲಿ ಸ್ಪರ್ಧೆಗಳನ್ನು ಆನ್‌ಲೈನ್ ಮೂಲಕ ಕೈಗೊಳ್ಳುವುದು | 14-12-2020 ರಿಂದ 16-12-2020 | ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 5 | ಜಿಲ್ಲಾ ಮಟ್ಟದಲ್ಲಿ ಸ್ಪರ್ಧೆಗಳನ್ನು ವರ್ಗವಾರು ಆಯೋಜಿಸಿ ವಿಜೇತರನ್ನು ಘೋಷಿಸುವುದು. | 21-12-2020 ರಿಂದ 22-12-2020 | ಆಯಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿ |
| 6 | ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನು ಪೂರ್ಣಗೊಳಿಸಿ ವಿಜೇತರ ಪಟ್ಟಿಯನ್ನು ಅಪರ ಮುಖ್ಯ ಚುನಾವಣಾಧಿಕಾರಿ ಇವರಿಗೆ ರವಾನಿಸುವುದು | 26-12-2020 | ಆಯಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು [ಹೈ ರೆಸಲ್ಯೂಷನ್ ಫೋಟೋಗಳು ಮತ್ತು ವಿಜೇತರ ಭಿತ್ತಿ ಚಿತ್ರಗಳು, ಕೊಲಾಜ್ ಮೇಕಿಂಗ್ ಇವುಗಳನ್ನು ಸ್ಕ್ಯಾನ್ ಮಾಡಿ ಪ್ರತಿಗಳನ್ನು consveep@gmail.com ಇ-ಮೇಲ್ ಮಾಡುವುದು. |
| 7 | ವಿದ್ಯಾರ್ಥಿಗಳ ಮಾಹಿತಿ ಹಾಗೂ ಇತರೆ ಸಂಬಂಧಿಸಿದ ವಿವರಗಳನ್ನು ಸಂಗ್ರಹಿಸಿ ಕ್ರೋಢೀಕರಿಸುವುದು | 26-12-2020 | ಆಯಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿ |
| 8 | ಜಿಲ್ಲಾ ಮಟ್ಟದ ಅಂತಿಮ ವಿಜೇತರ ವಿವರಗಳನ್ನು ಗೂಗಲ್ ಸ್ಪ್ರೆಡ್ ಶೀಟನಲ್ಲಿ ಅಳವಡಿಸುವುದು | 26-12-2020 | ಆಯಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿ |

| | | | |
|---|---|---|---|
| 9 | ಎಲ್ಲಾ ಜಿಲ್ಲೆಗಳ ರಸಪ್ರಶ್ನೆ, ಪ್ರಬಂಧ, ಭಿತ್ತಿಚಿತ್ರ ಮತ್ತು ಕೊಲಾಜ್ ಸ್ಪರ್ಧೆಗಳು ಪೂರ್ಣಗೊಂಡಿರುವ ಮಾಹಿತಿ ಸಂಗ್ರಹಣೆ | 26–12–2020 | ಹಿರಿಯ ಸಮಾಲೋಚಕರು [ಸ್ವೀಪ್] |
| 10 | ಪ್ರತಿ ಜಿಲ್ಲೆಯಿಂದ ವಿದ್ಯಾರ್ಥಿಗಳ ಮಾಹಿತಿ ಸಂಗ್ರಹಣೆ | 26–12–2020 | ಹಿರಿಯ ಸಮಾಲೋಚಕರು [ಸ್ವೀಪ್] |
| 11 | ರಾಜ್ಯ ಮಟ್ಟದಲ್ಲಿನ ಸ್ಪರ್ಧೆಗೆ ಭಾಗವಹಿಸುವ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ವಸತಿ ವ್ಯವಸ್ಥೆ ಒದಗಿಸುವುದು | ಜನವರಿ 2021ರ ಮೊದಲ ವಾರ | ಆಯುಕ್ತರು, ಬಿ.ಬಿ.ಎಂ.ಪಿ. |
| 12 | ವಿಭಾಗೀಯ ಮಟ್ಟದ ಸ್ಪರ್ಧೆಗಳು ಆನ್‌ಲೈನ್ ಮೂಲಕ ರಾಜ್ಯ ಮಟ್ಟದಲ್ಲಿ ಭಾಗವಹಿಸುವುದು | | ಮತದಾರ ಸಾಕ್ಷರತಾ ಸಂಘದ ತರಬೇತುದಾರರಿಂದ |
| 13 | ವಿಭಾಗೀಯ ಮಟ್ಟದಲ್ಲಿನ ವಿಜೇತರಿಗೆ ಆನ್‌ಲೈನ್ ಮೂಲಕ ರಾಜ್ಯಮಟ್ಟದ ಸ್ಪರ್ಧೆ | | ಅಪರ ಮುಖ್ಯ ಚುನಾವಣಾಧಿಕಾರಿ–1 ಇವರ ಅಧ್ಯಕ್ಷತೆಯಲ್ಲಿ ಸಮಿತಿ |
| 14 | ರಾಜ್ಯ ಮಟ್ಟದ ವಿಜೇತರಿಗೆ ಘೋಷಣೆ | | ಹಿರಿಯ ಸಮಾಲೋಚಕರು [ಸ್ವೀಪ್] |

**ಸಂಖ್ಯೆ ಸಿಆಸುಇ/39/ಸ್ವೀಪ್/2020 ದಿನಾಂಕ: 24ನೇ ನವೆಂಬರ್ 2020 ರ ಅನುಬಂಧ-3**

**2020-21 ನೇ ಸಾಲಿನ ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟ ಮತ್ತು ರಾಜ್ಯ ಮಟ್ಟದಲ್ಲಿ ನಡೆಯುವ ಸ್ಪರ್ಧೆಗಳಿಗೆ ಒದಗಿಸುವ ಅನುದಾನದ ವಿವರ**

# ತಾಲ್ಲೂಕು ಮಟ್ಟ

| ಉತ್ಪನ್ನ | ವೆಚ್ಚದ ರಚನೆ | ವೆಚ್ಚ | ಒಟ್ಟು ವೆಚ್ಚ |
|---|---|---|---|
| ಪುಸ್ತಕಗಳು ತಾಲ್ಲೂಕು ಮಟ್ಟಕ್ಕೆ | ರಸ ಪ್ರಶ್ನೆ ಒಂದು ತಾಲ್ಲೂಕಿಗೆ ರೂ.1750/- 204 ತಾಲ್ಲೂಕುಗಳಿಗೆ (1ನೇ ಬಹುಮಾನ ರೂ:1000/-, 2ನೇ ಬಹುಮಾನ ರೂ: 500/- ಮತ್ತು 3ನೆ ಬಹುಮಾನ ರೂ: 250/-) 1750 x 204 x 4 ವಿಭಾಗ (ಅನುಬಂಧ-01ರಲ್ಲಿ ತಿಳಿಸಿದಂತೆ 4 ಸ್ಪರ್ಧಾ ವಿಭಾಗಗಳು) | 14,28,000 | 36,31,200 |
| | ಪ್ರಬಂಧ ಕನ್ನಡ ಒಂದು ತಾಲ್ಲೂಕಿಗೆ ರೂ.900/- 204 ತಾಲ್ಲೂಕುಗಳಿಗೆ (1ನೇ ಬಹುಮಾನ ರೂ:500/-, 2ನೇ ಬಹುಮಾನ ರೂ: 250/- ಮತ್ತು 3ನೆ ಬಹುಮಾನ ರೂ: 150/-) 900 x 204 x 4 ವಿಭಾಗ (ಅನುಬಂಧ-01ರಲ್ಲಿ ತಿಳಿಸಿದಂತೆ 4 ಸ್ಪರ್ಧಾ ವಿಭಾಗಗಳು) | 7,34,400 | |
| | ಪ್ರಬಂಧ ಆಂಗ್ಲ ಒಂದು ತಾಲ್ಲೂಕಿಗೆ ರೂ.900/- 204 ತಾಲ್ಲೂಕುಗಳಿಗೆ (1ನೇ ಬಹುಮಾನ ರೂ:500/-, 2ನೇ ಬಹುಮಾನ ರೂ: 250/- ಮತ್ತು 3ನೆ ಬಹುಮಾನ ರೂ: 150/-)<br>900 x 204 x 4 ವಿಭಾಗ (ಅನುಬಂಧ-01ರಲ್ಲಿ ತಿಳಿಸಿದಂತೆ 4 ಸ್ಪರ್ಧಾ ವಿಭಾಗಗಳು) | 7,34,400 | |
| | ಭಿತ್ತಿಪತ್ರ ಮತ್ತು ಕೊಲಾಜ್ ತಯಾರಿಕೆ ಒಂದು ತಾಲ್ಲೂಕಿಗೆ ರೂ 900/- x 204 ತಾಲ್ಲೂಕುಗಳಿಗೆ<br>(1ನೇ ಬಹುಮಾನ ರೂ:500/-, 2ನೇ ಬಹುಮಾನ ರೂ: 250/- ಮತ್ತು 3ನೆ ಬಹುಮಾನ ರೂ: 150/-)<br>900 x 204 x 4 ವಿಭಾಗ (ಅನುಬಂಧ-01ರಲ್ಲಿ ತಿಳಿಸಿದಂತೆ 4 ಸ್ಪರ್ಧಾ ವಿಭಾಗಗಳು) | 7,34,400 | |
| ಬಹುಮಾನ ವಿಜೇತರಿಗೆ ಪ್ರಮಾಣ ಪತ್ರ | ಬಹುಮಾನ ವಿಜೇತರಿಗೆ ಪ್ರಮಾಣಪತ್ರ ವಿತರಣೆ ಒಟ್ಟು ಪ್ರಮಾಣಪತ್ರ ಮುದ್ರಣ ವೆಚ್ಚ 204 ತಾಲ್ಲೂಕು = 204 x 4 ವಿಭಾಗ x 4 ಒಟ್ಟು 3264 ಒಂದಕ್ಕೆ ರೂ.30/- ರಂತೆ<br>(ಅನುಬಂಧ-01ರಲ್ಲಿ ತಿಳಿಸಿದಂತೆ 4 ಸ್ಪರ್ಧಾ ವಿಭಾಗಗಳು) | | 97,920 |
| ತಾಲ್ಲೂಕು ಮಟ್ಟದ ಪ್ರಬಂಧ ಮೌಲ್ಯಮಾಪಕರ ಭತ್ಯೆ | ರಾಜ್ಯದಲ್ಲಿರುವ ಒಟ್ಟು ತಾಲ್ಲೂಕುಗಳಿಗೆ 204. ಪ್ರತಿ ತಾಲ್ಲೂಕಿಗೆ ರೂ: 2500 ರಂತೆ x 4 ವಿಭಾಗ x 204<br>(ಅನುಬಂಧ-01ರಲ್ಲಿ ತಿಳಿಸಿದಂತೆ 4 ಸ್ಪರ್ಧಾ ವಿಭಾಗಗಳು) | | 20,40,000 |
| | | **ಒಟ್ಟು** | **57,69,120** |

# ಜಿಲ್ಲಾ ಮಟ್ಟ

| ಉತ್ಪನ್ನ | ವೆಚ್ಚದ ರಚನೆ | ವೆಚ್ಚ | ಒಟ್ಟು ವೆಚ್ಚ |
|---|---|---|---|
| ಪುಸ್ತಕಗಳು ಜಿಲ್ಲಾ ಮಟ್ಟಕ್ಕೆ | ರಸ ಪ್ರಶ್ನೆ ಒಂದು ಜಿಲ್ಲೆಗೆ ರೂ.6000/- 4 ವಿಭಾಗಗಳಿಗೆ (ತಲಾ ಇಬ್ಬರಿಗೆ- 1ನೇ ಬಹುಮಾನ ರೂ:3000/-, 2ನೇ ಬಹುಮಾನ ರೂ: 2000/- ಮತ್ತು 3ನೆ ಬಹುಮಾನ ರೂ: 1000/-) 6000 x 33 x 4 (ತಲಾ 2 ತಂಡದಂತೆ) (ಅನುಬಂಧ-01ರಲ್ಲಿ ತಿಳಿಸಿದಂತೆ 4 ಸ್ಪರ್ಧಾ ವಿಭಾಗಗಳು) | 7,92,000 | 19,80,000 |
| | ಪ್ರಬಂಧ ಕನ್ನಡ ಒಂದು ಜಿಲ್ಲೆಗೆ ರೂ.3000/- 4 ವಿಭಾಗಗಳಿಗೆ (1ನೇ ಬಹುಮಾನ ರೂ:1500/-, 2ನೇ ಬಹುಮಾನ ರೂ: 1000/- ಮತ್ತು 3ನೆ ಬಹುಮಾನ ರೂ: 500/-) 3000 x 33 x 4 (ಅನುಬಂಧ-01ರಲ್ಲಿ ತಿಳಿಸಿದಂತೆ 4 ಸ್ಪರ್ಧಾ ವಿಭಾಗಗಳು) | 3,96,000 | |
| | ಪ್ರಬಂಧ ಆಂಗ್ಲ ಒಂದು ಜಿಲ್ಲೆಗೆ ರೂ.3000/- 4 ವಿಭಾಗಗಳಿಗೆ (1ನೇ ಬಹುಮಾನ ರೂ:1500/-, 2ನೇ ಬಹುಮಾನ ರೂ: 1000/- ಮತ್ತು 3ನೆ ಬಹುಮಾನ ರೂ: 500/-) 3000 x 33 x 4 (ಅನುಬಂಧ-01ರಲ್ಲಿ ತಿಳಿಸಿದಂತೆ 4 ಸ್ಪರ್ಧಾ ವಿಭಾಗಗಳು) | 3,96,000 | |
| | ಭಿತ್ರಿಪತ್ರ ಮತ್ತು ಕೊಲಾಜ್ ತಯಾರಿಕೆ<br>ಒಂದು ಜಿಲ್ಲೆಗೆ ರೂ,3000/- 4 ವಿಭಾಗಗಳಿಗೆ (1ನೇ ಬಹುಮಾನ ರೂ:1500/-, 2ನೇ ಬಹುಮಾನ ರೂ: 1000/- ಮತ್ತು 3ನೆ ಬಹುಮಾನ ರೂ: 500/-)<br>3000 x 33 x 4 (ಅನುಬಂಧ-01ರಲ್ಲಿ ತಿಳಿಸಿದಂತೆ 4 ಸ್ಪರ್ಧಾ ವಿಭಾಗಗಳು) | 3,96,000 | |
| ಬಹುಮಾನ ವಿಜೇತರಿಗೆ ಪ್ರಮಾಣ ಪತ್ರ | ಬಹುಮಾನ ವಿಜೇತರಿಗೆ ಪ್ರಮಾಣಪತ್ರ ವಿತರಣೆ ಒಟ್ಟು 1800 ಪ್ರಮಾಣಪತ್ರ ಮುದ್ರಣ ವೆಚ್ಚ 33 ಜಿಲ್ಲೆ + 1 ರಾಜ್ಯ = 34 x 6 ವಿಭಾಗ x 3 ಒಟ್ಟು 1836 ಒಂದಕ್ಕೆ ರೂ.30 ರಂತೆ<br>(ಅನುಬಂಧ-01ರಲ್ಲಿ ತಿಳಿಸಿದಂತೆ 4 ಸ್ಪರ್ಧಾ ವಿಭಾಗಗಳು) | | 55080 |
| ಜಿಲ್ಲಾ ಮಟ್ಟದ ಪ್ರಬಂಧ ಮೌಲ್ಯಮಾಪಕರ ಭತ್ಯೆ | ರಾಜ್ಯದಲ್ಲಿನ 33 ಜಿಲ್ಲೆಗಳಿಗೆ ರೂ: 1500 (750 x 2 x 4 ವಿಭಾಗ x 33)<br>(ಅನುಬಂಧ-01ರಲ್ಲಿ ತಿಳಿಸಿದಂತೆ 4 ಸ್ಪರ್ಧಾ ವಿಭಾಗಗಳು) | | 1,98,000 |
| | | **ಒಟ್ಟು** | **22,33,080** |

# ರಾಜ್ಯ ಮಟ್ಟ

| ಉತ್ಪನ್ನ | ವೆಚ್ಚದ ರಚನೆ | ವೆಚ್ಚ | ಒಟ್ಟು ವೆಚ್ಚ |
|---|---|---|---|
| ಪುಸ್ತಕಗಳು [ರಾಜ್ಯಮಟ್ಟಕ್ಕೆ] | ರಸ ಪ್ರಶ್ನೆ 1, 2 ಮತ್ತು 3ನೆ ಬಹುಮಾನ ತಲಾ ಇಬ್ಬರಿಗೆ (1ನೇ ಬಹುಮಾನ ರೂ:5000/–, 2ನೇ ಬಹುಮಾನ ರೂ: 4000/– ಮತ್ತು 3ನೆ ಬಹುಮಾನ ರೂ: 3000/–)<br>5000 x 2=10,000<br>4000 x 2= 8,000<br>3000 x 2= 6,000 | 24000 | 48,000 |
| | ಪ್ರಬಂಧ ಕನ್ನಡ (1ನೇ ಬಹುಮಾನ ರೂ:5000/–, 2ನೇ ಬಹುಮಾನ ರೂ: 4000/– ಮತ್ತು 3ನೆ ಬಹುಮಾನ ರೂ: 3000/–) | 12000 | |
| | ಪ್ರಬಂಧ ಆಂಗ್ಲ (1ನೇ ಬಹುಮಾನ ರೂ:5000/–, 2ನೇ ಬಹುಮಾನ ರೂ: 4000/– ಮತ್ತು 3ನೆ ಬಹುಮಾನ ರೂ: 3000/–) | 12000 | |
| | | ಒಟ್ಟು | **48,000** |

| | |
|---|---|
| ತಾಲ್ಲೂಕು ಮಟ್ಟದ ವೆಚ್ಚ | 57,69,120-00 |
| ಜಿಲ್ಲಾ ಮಟ್ಟದ ವೆಚ್ಚ | 22,33,080-00 |
| ರಾಜ್ಯ ಮಟ್ಟದ ವೆಚ್ಚ | 48,000-00 |
| ಒಟ್ಟು | 80,50,200-00 |